(ಅ) ಗ್ರಾಮದ ವ್ಯಾಪ್ತಿಯಲ್ಲಿ ಬರುವ ರಾಜ್ಯಾಂದ್ಯಾಂತ ದಾರಿ ದೀಪದ ಕಂಬಗಳ ಒಟ್ಟಾರೆ ಸಂಖ್ಯೆ ಎಷ್ಟು ?

(ಇ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದ ಹಳ್ಳಿಗಳಲ್ಲಿ ವಿದ್ಯುತ್ ಕಂಬಗಳಿಗೆ ಹಾಕಿರುವ ಬಲ್ಬುಗಳು, ಟ್ಯೂಬುಗಳ, ಮರ್ಕ್ಯುರಿ ಲ್ಯಾಂಪುಗಳ ಹಾಗೂ ದೇವಸ್ಥಾನಗಳಿಗೆ ಪೂರೈಸಿದ ಸರಬರಾಜಿನ ವಿವರ ಕೊಡುವುದು.

ಈ) ರಾಜ್ಯದಲ್ಲಿಯು ಎಷ್ಟು ಜನತಾ ಮನೆಗಳಿಗೆ ವಿದ್ಯುತ್ ದೀಪಗಳನ್ನು ಹಾಗೂ ದಾರಿ ದೀಪಗಳನ್ನು ಕೊಡಬೇಕಾಗಿದೆ.

ಉ) ಪಂಚಾಯಿತಿಯ ಹೆಸರಿನಲ್ಲಿ ಸರ್ಕಾರಿ ವಿದ್ಯುತ್‌ನ್ನು ಕೆಲವಾಸಗಿಯವರು ದುರುಪಯೋಗ ಮಾಡುತ್ತಿರುವುದನ್ನು ತಡೆಹಿಡಿಯಲು ಸರ್ಕಾರದವರ ಕಾರ್ಯಕ್ರಮವೇನು ?

ಊ) ಗ್ರಾಮಾಂತರ ಪ್ರದೇಶದ ದಾರಿದೀಪದ ನಳದ ಯೋಜನೆಗಾಗಿ ಬರುತ್ತಿರುವ ವಿದ್ಯುತ್ ಖರ್ಚು ಹಾಗೂ ವಿದ್ಯುತ್ ಬಳಕೆ ಪ್ರಮಾಣವೆಷ್ಟು ?

ಶ್ರೀ ಜೆ. ಹೆಚ್ ಪಟೇಲ್ (ವಿದ್ಯುಚ್ಛಕ್ತಿ ಮತ್ತು ಕೈಗಾರಿಕಾ ಸಚಿವರು)

ಅ) ೩೧-೭-೧೯೮೬ರ ವೇಳೆಗೆ ೨೪,೭೭೦ ಹಳ್ಳಿಗಳನ್ನು ವಿದ್ಯುದ್ದೀಕರಿಸಲಾಗಿದೆ.

ಆ) ರಾಜ್ಯಾದ್ಯಂತ ಗ್ರಾಮಗಳಲ್ಲಿ ಒಟ್ಟು ೩,೪೪,೯೮೫ ದಾರಿ ದೀಪದ ಕಂಬಗಳಿವೆ.

ಇ) ಬಲ್ಬು ಟ್ಯೂಬುಗಳು, ಇವುಗಳನ್ನು ಪಂಚಾಯಿತಿ, ನಗರಸಭೆ, ಪುರಸಭೆಗಳು, ನಗರ ಪಾಲಿಕೆಗಳು, ಮತ್ತು ವಿದ್ಯುತ್ ಮಂಡಳಿ ಹಾಕುವುದರಿಂದ ವಿವರಗಳನ್ನು ಕೊಡಲಾಗುವುದಿಲ್ಲ.

ಈ) ೫೩,೨೭೧ ಜನತಾ ಮನೆಗಳಿಗೆ ಮತ್ತು ೩,೭೭೦ ಜನತಾ ಕಾಲೋನಿಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಉ) ವಿದ್ಯುತ್ ಬಳಕೆಯ ದುರುಪಯೋಗವನ್ನು ತಡೆಗಟ್ಟಲು ವಿದ್ಯುತ್ ಮಂಡಳಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದೆ.

ಊ) ದಾರಿ ದೀಪಗಳ ಬಾಬ್ತು ಬಿಲ್ಲನ್ನು ಕಂಭ್ಯೆಂಡ್ ಲೋಡ್ ಆಧಾರದ ಮೇಲೆ ಮಾಡುತ್ತಿರುವುದರಿಂದ ವಿದ್ಯುತ್ ಬಳಕೆಯ ಪ್ರಮಾಣದ ಅಂಕಿಸಂಖ್ಯೆ ದೊರೆಯುವುದಿಲ್ಲ. ೧೯೮೫-೮೬ರಲ್ಲಿ ನೀರು ಸರಬರಾಜು ಯೋಜನೆಗಳಿಗೆ ಬಳಸಿದ ವಿದ್ಯುತ್ ಪ್ರಮಾಣ ೨೦.೧೫೫ ದಶಲಕ್ಷ ಯೂನಿಟ್‌ಗಳು.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಹಣದ ದುರುಪಯೋಗದ ಬಗ್ಗೆ

೧೯೪. ಬಿ. ಎಂ. ಇದಿನಬ್ಬ (ಉಳ್ಳಾಲ)—ಮಾನ್ಯ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಕುಂದಾಪುರ ಸ್ಥಳೀಯ ಸ್ವಾವಲಂಬ ಸಂಘಕ್ಕೆ ನೀಡಿದ ಹಣದಲ್ಲಿ ೯೦,೦೦೦ ರೂ.ಗಳ ವಂಚನೆಯಾಗಿದೆಯೇ ?

ಆ) ಈ ಬಗ್ಗೆ ದೂರು ದಾಖಲಾಗಿದೆಯೇ, ಹಾಗೂ ಈ ವಂಚನೆ ಯಾವಾಗ ಆಯಿತು.

ಇ) ಈ ಹಣ ವಸೂಲಾತಿಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು)—

ಅ) ಆಗಿದೆ.

ಆ) ದಿನಾಂಕ ೧೦-೭-೧೯೮೬ ರಂದು ಕುಂದಾಪುರ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಲಾಗಿದೆ. ಈ ವಂಚನೆಯು ದಿನಾಂಕ ೨೯-೧೨-೧೯೮೫ ರಿಂದ ೩೦-೧೨-೧೯೮೫ರ ಅವಧಿಯಲ್ಲಿ ಆಗಿದೆ.

ಇ) ರೂ. ೯೦,೦೦೦ ಗಳನ್ನು ಈಗಾಗಲೇ ವಸೂಲು ಮಾಡಲಾಗಿದೆ.